International Journal of Kannada Research 2018; 4(4): 28-31

International Journal of Kannada Research
www.kannadajournal.com

**ISSN: 2454–5813**
IJKR 2018; 4(4): 28-31
© 2018 IJKR
www.kannadajournal.com
Received: 07-08-2018
Accepted: 08-09-2018

**ಆಶಾರಾಣಿ. ಕೆ**
ಕನ್ನಡ ಅಧ್ಯಾಪಕರು,
ವಿಶ್ವವಿದ್ಯಾನಿಲಯ ವಿಜ್ಞಾನ
ಕಾಲೇಜು, ತುಮಕೂರು
ವಿಶ್ವವಿದ್ಯಾನಿಲಯ, ತುಮಕೂರು

**Correspondence**
**ಆಶಾರಾಣಿ. ಕೆ**
ಕನ್ನಡ ಅಧ್ಯಾಪಕರು,
ವಿಶ್ವವಿದ್ಯಾನಿಲಯ ವಿಜ್ಞಾನ
ಕಾಲೇಜು, ತುಮಕೂರು
ವಿಶ್ವವಿದ್ಯಾನಿಲಯ, ತುಮಕೂರು

# ಪುರುಷ ಮೌಲ್ಯ ನಿರಾಕೃತ: ಸ್ತ್ರೀ ದೇಹ ಸಂಕಥನ

**ಆಶಾರಾಣಿ. ಕೆ**

ಸ್ತ್ರೀ–ಪುರುಷರಲ್ಲಿ ನಿಸರ್ಗ ಸಹಜವಾಗಿ ಇದ್ದ ದೇಹ’ ಭಿನ್ನತೆಗಳೇ ಸಮಾಜ ವ್ಯವಸ್ಥೆಯಲ್ಲಿ ಲಿಂಗ ತಾರತಮ್ಯ ನೀತಿಯ ಕಾರಣವಾಗಿ ಬಿಟ್ಟವು ಎಂಬುದು ಹೆಣ್ಣಿನ ಬದುಕಿನ ದುರಂತ. ಸ್ತ್ರೀ–ಪುರುಷ ಸಮಾನತೆಗೆ ಅಡ್ಡಿ ಬಂದಿರುವ ಪ್ರಮುಖ ಕಾರಣ ಆಕೆಯ ದೇಹ ರಚನೆ ಜೈವಿಕತೆ ಎಂಬ ವಾದ ಇಂದಿಗೂ ಇದೆ. ಪುರುಷನ ಹಾರ್ಮೋನುಗಳು ಆತನನ್ನು ಒಬ್ಬ ಬಲಿಷ್ಠ ಆಕ್ರಮಣಕಾರಿ ಧೃಡಕಾಯ ವ್ಯಕ್ತಿಯನ್ನಾಗಿ ಮಾಡಿದರೆ, ಸ್ತ್ರೀಯ ಹಾರ್ಮೋನುಗಳು ಆಕೆಯನ್ನು ಓರ್ವ ಸಾಧು ಸ್ವಭಾವದ ಮೃದು ಭಾವನೆಗಳನ್ನು ಹೊಂದಿದ ಒಬ್ಬ ಬಲಾಢ್ಯವಲ್ಲದ ವ್ಯಕ್ತಿಯನ್ನಾಗಿ ಮಾಡುತ್ತದೆ, ಎಂಬ ಅಭಿಪ್ರಾಯವಿದೆ. ಪುರುಷನ ಜೈವಿಕ ರಚನೆ ಪುರುಷತ್ವವನ್ನು ಸೃಷ್ಟಿಸಿದರೆ, ಸ್ತ್ರೀಯರ ಜೈವಿಕ ರಚನೆ ಹೆಣ್ತನವನ್ನು ಸೃಷ್ಟಿಸುತ್ತದೆ. ಈ ಹಿನ್ನೆಲೆಯಲ್ಲಿಯೇ ಸಹನೆ, ಮೃದುತ್ವ, ಅತಿಭಾವುಕತೆ ಪೋಷಣಾ ಮನೋಭಾವವನ್ನು ಹೆಣ್ಣು ಗುಣ್ಣಗಳೆಂದು ಧೈರ್ಯ, ಸಾಹಸ, ಬುದ್ಧಿವಂತಿಕೆಗಳನ್ನು ಗಂಡು ಗುಣಗಳಂತಲೂ ಹೆಣ್ಣಿನ ಈ ಗುಣಗಳು ಅವಳ ಸ್ವತಂತ್ರ ವ್ಯಕ್ತಿತ್ವಕ್ಕೆ ಕಳಂಕ ತರುವಂತಹವು, ಗಂಡು ಗುಣಗಳು ಅವನ ಸಮರ್ಥ ವ್ಯಕ್ತಿತ್ವವನ್ನು ಕಟ್ಟಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಹೀಗೆ ಪುರುಷ ಪ್ರಧಾನ ಗುಣಗಳು ಎಂದು ಗುರುತಿಸಲಾದ ಗುಣಗಳಿಗೆ ಹೆಚ್ಚಿನ ಮೌಲ್ಯವನ್ನು ನೀಡಿ ಸ್ತ್ರೀ ಸಹಜವಾದ ಗುಣಗಳು ಎನ್ನುವುದಕ್ಕೆ ನಕಾರಾತ್ಮಕವಾದ ಮೌಲ್ಯ ನೀಡಿರುವುದೇ ಸ್ತ್ರೀಯ ವ್ಯಕ್ತಿತ್ವವನ್ನು ಅಧೀನ ಮತ್ತು ಗೌಣವಾಗಿ ಪರಿಗಣಿಸಿರುವುದಕ್ಕೆ ಕಾರಣವಾಗಿರಬಹುದು. ಹೀಗೆ ಹೆಣ್ಣಿನ ಸಹಜ ಹೆಣ್ತನವೇ ಬೇರೆ ಪುರುಷ ಮೌಲ್ಯ ಆರೋಪಿತ ಹೆಣ್ತನವೇ ಬೇರೆಯಾಗಿದ್ದು, ಹೆಣ್ಣು ಈಗ ಇಂತಹ ನೆಲೆಯ ಹುಡುಕಾಟದಲ್ಲಿದ್ದಾಳೆ, ಹೀಗೆ ಗಂಡು ಪ್ರಧಾನ ಶ್ರೇಷ್ಠ ಹೆಣ್ಣು ಅಧೀನ ಕನಿಷ್ಟ ಹೀಗೊಂದು ಪ್ರಧಾನ ಅಧೀನ ಸಂಸ್ಕೃತಿಯ ಹುಟ್ಟಿಗೆ ಕಾರಣ ಏನು, ಇಬ್ಬರಲ್ಲೂ ಕೂಡ ನಿಸರ್ಗ ಸಹಜವಾದ ಸಮಾನ ವೈಶಿಷ್ಟ್ಯ ಸಾಮಾರ್ಥ್ಯಗಳೇ ಇರುವ ಸಂದರ್ಭದಲ್ಲೂ; ಆಕೆಯದ್ದೆ ಆದ ವಿಶಿಷ್ಟತೆಗಳನ್ನು ಶಕ್ತಿ ಸಾಮಾರ್ಥ್ಯಗಳನ್ನು ಕಡೆಗಣಿಸಿ ಪುರುಷ ತನ್ನದೇ ಆದ ಯಜಮಾನ್ಯದ ಮೊಹರನ್ನು ಒತ್ತಿ ಆಕೆಯನ್ನು ತನ್ನ ಅಧೀನಳನ್ನಾಗಿ ಮಾಡಿಕೊಂಡಿರುವ, ಪುರುಷ’ ಯಜಮಾನ್ಯದ ಹುನ್ನಾರವನ್ನು ಬಯಲಿಗೆಳೆಯಬೇಕಾದರೆ ಬೋವಾ ಹೇಳುವ ಹಾಗೆ ಪುರುಷ ಕಥಾನಕದಲ್ಲಿ ದೊರೆಯುವ ಮಹಿಳಾ ಕಲ್ಪಿತ ಚರಿತ್ರೆಯ ಮೊರೆಹೋಗಬೇಕು. ಮನುಕುಲದ ಆರಂಭಿಕ ಹಂತದಿಂದೇನು ಹೆಣ್ಣು ಗಂಡಿನ ಗುಲಾಮಗಳೇನೂ ಅಲ್ಲ ಅಥವಾ ಅದು ದುತ್ತೆಂದು ಸಂಭವಿಸಿದ ಘಟನೆಯೂ ಅಲ್ಲ, ಮನುಕುಲ ವಿಕಾಸದ ಜೊತೆ ಜೊತೆಯಲ್ಲಿ ಪ್ರಾತಿನಿಧ್ಯ ಪ್ರಾಮುಖ್ಯತೆ ಕಡಿಮೆಯಾಗುತ್ತಾ ಆಕೆಯ ಹೆಣ್ತನ ಪುರುಷ ಮೌಲ್ಯಗಳಿಗೆ ಒಳಗಾಗುತ್ತಾ ಆಕೆ ಆತನ ಅಧೀನಳಾದಳು. ಅಲೆಮಾರಿ ಹಂತದಿಂದ ಕುಟುಂಬ ವ್ಯವಸ್ಥೆ ರೂಪುಗೊಂಡ ನಂತರ ಆಸ್ತಿಯ ಹಕ್ಕು ದೊರೆಯಿತು. ಆ ಆಸ್ತಿಯ ಹಕ್ಕು ತನ್ನ ನಂತರ ತನ್ನ ಮಕ್ಕಳಿಗೆ ಎಂದಾಗ ವಂಶಪಾರಂಪರ್ಯ ಕಲ್ಪನೆ ಬಂದ ನಂತರದಲ್ಲಿ; ಹೆಣ್ಣಿನ ಬಸಿರು ಮತ್ತು ಅವಳ ತಾಯ್ತನದ ಮೇಲೆ ವಂಶ ನಿರ್ಧರಿಸುವ ಹೆಣ್ಣಿನ ತಾಯ್ತನ, ಶೀಲ, ಪಾವಿತ್ರ್ಯ, ಪತ್ನಿತ್ವ ಇವೆಲ್ಲಾ ಪುರುಷ ಮೌಲ್ಯಕ್ಕೆ ಒಳಪಟ್ಟವು ಹೀಗೆ ಹೆಣ್ಣಿನ ಜೈವಿಕತೆಗೆ ಸಂಬಂಧಿಸಿದ ಮಾತೃತ್ವ, ಪತ್ನಿತ್ವ, ಪಾವಿತ್ರ್ಯಗಳು ಹೆಣ್ಣಿನ ಬಾಳಿನ ಶೋಷಿತ ಅಸ್ತ್ರಗಳಾಗಿ ಹೆಣ್ಣು ಕೂಡ ಗಂಡಿನ ಖಾಸಗಿ ಆಸ್ತಿಯಾದಳು. ಹೆಣ್ಣು ದೇಹದ ಮೇಲೆ ಗಂಡಿನ ಅಧಿಕಾರ ಸ್ಥಾಪನೆಯಾಯಿತು.

ಪುರುಷ ಪ್ರಧಾನ್ಯತೆ ಇಂತಹ ಹೆಣ್ಣಿನ ಜೈವಿಕ ಭಿನ್ನತೆಗಳನ್ನೆ ಆಕೆಯನ್ನು ಹಣೆಯುವ ಅಸ್ತ್ರಗಳನ್ನಾಗಿಸಿಕೊಂಡಿತು. ಈ ಕಾರಣಗಳಿಂದಲೇ ಹೆಣ್ಣು ಮತ್ತು ಗಂಡು ಸಮಾಜದಲ್ಲಿ ಸಮಾನ ಪಾತ್ರಗಳನ್ನು ನಿರ್ವಹಿಸಲು ಸಾಧ್ಯವಿಲ್ಲ ಎಂಬ ಮಿಥ್ಯ ಸೃಷ್ಟಿಸಿತು. ಇಂತಹ ಮಿತಿಗಳ ಆಚೆ ಹೆಣ್ಣು ಯೋಚನೆಗೆ ಹತ್ತಿದ್ದು ತನ್ನದೊಂದು ಅಸ್ತಿತ್ವವನ್ನು ವಿಸ್ಮೃತಿಗೆ ತಳ್ಳಿ ಬಿಟ್ಟಿದ್ದ ವ್ಯವಸ್ಥೆಯ ಕ್ರೌರ್ಯ ಮತ್ತು

ತನ್ನ ಈ ದುಸ್ಥಿತಿಗೆ ಕಾರಣ ತಾನಿರುವ ವಾತಾವರಣದಲ್ಲಿದೆ ಎಂದು ಗ್ರಹಿಸುವ ಶಕ್ತಿಯೂ ಕುಂದಿಹೋಗಿ ತನ್ನ ಹೆಣ್ಣು ಜನ್ಮವನ್ನು ನಿಂದಿಸಿಕೊಂಡು ಮೌನಿಯಾದಳು. ಇಪ್ಪತ್ತನೆಯ ಶತಮಾನದಲ್ಲಾದ ಜಾಗತಿಕ ಕಾರಣಗಳಿಂದ ಇತರ ದಮನಿತ ಸಮುದಾಯಗಳಂತೆ ಮಹಿಳಾ ಸಮುದಾಯವು ಜಾಗೃತಗೊಂಡು ದನಿಯೆತ್ತಲು ಆರಂಭಿಸಿತು. ಆಧುನಿಕ ಕನ್ನಡ ಮಹಿಳಾಕಥಾ ಸಾಹಿತ್ಯದಲ್ಲಿ ಇಂತಹ ಜಾಗೃತಗೊಂಡ ಮಹಿಳಾ ದನಿಗಳನ್ನು ಗುರುತಿಸಬಹುದು. 20ನೇ ಶತಮಾನದ ಎಪ್ಪತ್ತರ' ದಶಕದ ಪ್ರಮುಖ ಬರಹಗಾರ್ತಿಯರಾದ ಎಚ್.ವಿ.ಸಾವಿತ್ರಮ್ಮ, ವೀಣಾಶಾಂತೇಶ್ವರ, ನೇಮಿಚಂದ್ರವರವರ ಬರವಣಿಗೆಗಳಲ್ಲಿ ಪಾವಿತ್ರ್ಯ, ತಾಯ್ತನ ಹೆಣ್ಣಿನ ಜೈವಿಕ ಸಂಬಂಧಿ ವಿವಾಹ. ಮರು ನಿರ್ವಚನೆಗೊಳಪಡುತ್ತಾ ಪುರುಷ ಮೌಲ್ಯ ನಿರಾಕೃತ ಹೆಣ್ಣಿನ ಸಹಜ ನೆಲೆಗಳು ಕಂಡುಬಂದವು.

ಪುರುಷ ಲೋಕಕ್ಕೆ ಎದುರಾಗಿ ಸ್ತ್ರೀಲೋಕದ ಅನುಭವಗಳನ್ನು ಕಟ್ಟಿಕೊಡುವ ಪುರುಷ ಲಿಂಗ ವ್ಯತ್ಯಾಸವನ್ನು ಮೀರಿದ ಹೆಣ್ಣಿನ ನಿಜದ ವ್ಯಕ್ತಿತ್ವದ ಹುಡುಕಾಟವನ್ನು ವೀಣಾರವರ ಕಥೆಗಳಲ್ಲಿ ಕಾಣಬಹುದು. ವೀಣಾರ ಕಥೆಗಳಲ್ಲಿ ಸಮುದಾಯದ ಮಹತ್ವದ 'ವಿವಾಹ ಸಂಸ್ಥೆ ತೀವ್ರ' ಶೋಧನಕ್ಕೆ ಒಳಗಾಗುತ್ತದೆ. ಹೆಣ್ಣಿನ ಮಟ್ಟಿಗೆ ನಿಯಂತ್ರಕ ಶಕ್ತಿಯಾಗಿ ಅವಳ ಹಿಡಿಯಾದ ವ್ಯಕ್ತಿತ್ವವನ್ನೇ ನಾಶಮಾಡುತ್ತಾ, ಅವಳ ವ್ಯಕ್ತಿತ್ವವನ್ನು ಅಧೀನತೆಗೆ ಸಿಲುಕಿಸುವ ಶಕ್ತಿ ಕೇಂದ್ರ ಇದಾದುದರಿಂದಲೇ ಇದನ್ನು ಹೆಣ್ಣು ಮುಖಾಮುಖಿಯಾಗದೆ ಹೊರಬರಲು ಸಾಧ್ಯವಿಲ್ಲ, ಈ ತಾತ್ವಿಕ ಹಿನ್ನಲೆಯಲ್ಲಿ ರಚನೆಯಾಗಿರುವ ಇವರ ಕಥೆ "ಕೊನೆಯ ದಾರಿ'. ಮದುವೆ ಮತ್ತು ದಾಂಪತ್ಯಗಳ ಮುಖಾಮುಖಿಯಲ್ಲಿ ಬಿಡುಗಡೆಯ ಆಶಯಗಳು ಈ ಕಥೆಯಲ್ಲಿ ಧ್ವನಿತವಾಗುತ್ತವೆ. ತಾಯ್ತನ ಮತ್ತು ವಿವಾಹಗಳೆರಡು ಕಥೆಯಲ್ಲಿ ಮುಖಾಮುಖಿಯಾಗುವುದನ್ನು ಕಾಣಬಹುದು. ಮದುವೆ ಎಂಬ ಕಟ್ಟುಪಾಡಿಗೆ ಒಳಗಾಗದೆ ತನ್ನದೆ ಆದ ವಿಶಿಷ್ಟ ಜೈವಿಕ ಅನುಭವವೊಂದನ್ನು ಸವಿಯುವ ಆಸೆ ಲಿಲಿಗೆ ತನ್ನ ಪಕ್ಕದ ಮನೆಯಲ್ಲಿ ಇರುವಂತಹ ಮುನ್ನಿಯಂತ ಮಗುವನ್ನು ಪಡೆಯುವ ಆಸೆ ಅದು ಯಾರಿಂದಾದರೂ ಸರಿ ಹೇಗಾದರೂ ಸರಿ ಪುರುಷ ಮೌಲ್ಯ ರೂಪಿತ ವಿವಾಹ ಮತ್ತು ಪಾತಿವ್ರತ್ಯದ ಎಲ್ಲಾ ಕಟ್ಟುಕಟ್ಟಳೆಗಳನ್ನು ಸರಿಸಿ ವೈವಾಹಿಕ ಬದುಕಿನ ಆಚೆ ನಿಷಿದ್ಧವಾಗಿರುವ ತಾಯ್ತನವ ಅನುಭವಿಸುವ ತವಕ. ವೈವಾಹಿಕ ಬದುಕಿನ ಆಚೆ ಹೆಣ್ಣು ತಾಯಿಯಾಗುವುದು ನಿಷಿದ್ದ. ಅಂತಹ ತಾಯ್ತನಕ್ಕೆ ಸಮಾಜದಲ್ಲಿ ಮಾನ್ಯತೆ ಇಲ್ಲ. ಇಂತಹ ಕಟ್ಟುಕಟ್ಟಳೆ ಮಾನ್ಯತೆಗಳೆಲ್ಲಾ ಗಾಳಿಗೆ ತೂರಿರುವ ಲಿಲಿಯ ಯಾರಿಂದಾದರೂ ಸರಿ ಹೇಗಾದರೂ ಸರಿ ತಾಯಿಯಾಗಿಯೇ ತೀರಬೇಕೆಂಬ ಸ್ಥಾಪಿತ ಚೌಕಟ್ಟನ್ನು ಮೀರುತ್ತಾಳೆ. ಮಿನಿಯ ಮಟ್ಟಿಗೆ ವಿವಾಹ ಒಂದು ಬಾವಿ; ಈಗಾಗಲೇ ಅದರಲ್ಲಿ ಬಿದ್ದು ಪಾರಾಗಿ ಬಂದ ನನಗೆ "ಲಗ್ನ ಎಂದ ಕೂಡಲೇ ನೆನಪಾಗುವುದು ಆ ಕತೆಯಲ್ಲ. ಆ ಗದ್ದಲ, ಬಜಂತ್ರಿ ಅರಿಷಿನ ಮತ್ತು ಆ ಪಶು ಪತಿ ದೇವರು ಅವನೊಂದಿಗೆ ನೆನಪಾಗುವುದು, ಅವನ ಆ ಅಬ್ಬರ ಅವನ ಕುಡಿತ. ಅವನ ಸೂಳೆಯರು. ಅವನು ನನಗೆ ಕೊಟ್ಟ ಹಿಂಸೆ ಆಕೆಯ ಆವೇಷ ಆ ಪಶು–ಪತಿ ದೇವರು" ಎನ್ನುವ ಮಾತಿನಲ್ಲಿರುವ ವಿವಾಹ ಸಂಬಂಧದ ಪುರುಷನ ಶೌರ್ಯ, ದಬ್ಬಾಳಿಕೆ ಆತನ ಯಜಮಾನಿಕೆ ವ್ಯಕ್ತವಾಗುತ್ತದೆ. ವೈವಾಹಿಕ ಬದುಕಿನೊಳಗೆ ಆತನ ದೌರ್ಜನ್ಯ ಹೆಣ್ಣನ್ನು ಅಧೀನಳನ್ನಾಗಿ ನಡೆಸಿಕೊಳ್ಳುವ ಆತನ ಯಜಮಾನಿಕೆ ಇಂತಹ ಒಪ್ಪಿತ ದೌರ್ಜನ್ಯ ಶೋಷಣೆಯ ಆಚೆ ನಿಲ್ಲುವ ನಿರ್ಧಾರವನ್ನು ತಳೆಯುವ ಲಿಲಿ ತನ್ನ ಸಹಜ ತಾಯ್ತನವನ್ನು ಈ ಕಾರಣಕ್ಕಾಗಿ ನಿರಾಕರಿಸಲು ಸಿದ್ದಳಿಲ್ಲ. ವಿವಾಹ ಎನ್ನುವುದೇ ಅಸಮಾನತೆಯ ಮೇಲೆ ನಿಂತಿರುವ ಸಂಸ್ಥೆ. ಬದುಕನ್ನು ಸಮಾನವಾಗಿ ಎದುರಿಸುತ್ತೇವೆಂದು ಪ್ರತಿಜ್ಞೆಯೊಡನೆ ದಾಂಪತ್ಯಕ್ಕೆ ಕಾಲಿರಿಸುವ ದಂಪತಿಗಳ ನಡುವೆ ಸಮಾನತೆಯೇ ಇರುವುದಿಲ್ಲ. ದಾಂಪತ್ಯ ಪುರುಷ ಪ್ರಧಾನ ಅಲ್ಲ ಪುರುಷನೇ ಯಜಮಾನ ಹೆಣ್ಣು ಆತನಿಗೆ ಅಧೀನ. ಇಲ್ಲಿ ಲೇಖಕಿ ನಿರಾಕರಿಸುವುದು ಇಂತಹ ಅಧೀನತೆಯ ಪುರುಷ ಯಜಮಾನ್ಯದ ಅಸಮಾನತೆಯ ಮೇಲೆ ನಿಂತಿರುವ, ಹೆಣ್ಣಿನ ವ್ಯಕ್ತಿತ್ವವನ್ನು ಹೊಸಕಿ ಹಾಕುವ ಅವಳ ಬದುಕಿನ ಸಾಧ್ಯತೆಗಳನ್ನೇ ಮುರುಟಿ ಹಾಕುತ್ತದೆ. ವಿವಾಹ ಸಂಸ್ಥೆಯನ್ನು ಸಮಾನತೆಯ ಹೊರತು, ಸಮನ್ವಯದ ಮೇಲು–ಕೀಳರಿಮೆಯಿಲ್ಲದ ಯಜಮಾನ–ದಾಸಿ ಎನ್ನುವ ಪರಿಕಲ್ಪನೆಗಳಿಲ್ಲದ ವಿವಾಹ ಸಂಸ್ಥೆಯನಲ್ಲ. ಬದಲಾಗುತ್ತಿರುವ ಸಾಮಾಜಿಕ ಸಂದರ್ಭವು ಈ ಹಿನ್ನಲೆಯಲ್ಲಿ ವಿವಾಹ ಸಂಸ್ಥೆಯನ್ನು ನಿರ್ವಚಿಸಿಕೊಳ್ಳುವುದು ಈ ಹೊತ್ತಿನ ಅನಿವಾರ್ಯವಾಗಿದೆ.

ಸಮಾಜ ವ್ಯವಸ್ಥೆಯಲ್ಲಿ ಹೆಣ್ಣಿನ ವೈಯಕ್ತಿಕ ಹಾಗೂ ಜೈವಿಕವಾದ ಲೈಂಗಿಕತೆಯು ಕೂಡ ಪುರುಷ ಮೌಲ್ಯ ಆರೋಪಿತ, "ಮಾನಸಿಕ–ಲೈಂಗಿಕ ಅನುಭವಗಳು ಕೇವಲ ಜೈವಿಕ–ಕ್ರಿಯೆಗಳಲ್ಲದೆ ಆಯಾ ಸಮಾಜದ ಸಮಕಾಲೀನ ಪರಿಸ್ಥಿತಿಗಳಿಂದ ಪ್ರಭಾವಿಸಲ್ಪಟ್ಟಿರುತ್ತವೆ ಎಂದು ಅಭಿಪ್ರಾಯ ಪಡುತ್ತಾಳೆ 'ಮಿಷೆಲ್'. ಹೆಣ್ಣಿನ ಮಾನಸಿಕ ಲೈಂಗಿಕ ಅನುಭವಗಳು ಕೂಡ ಪುರುಷ ಮೌಲ್ಯ ಆರೋಪಿತ. ಹಾಗಾಗಿ ಹೆಣ್ಣು ಲೈಂಗಿಕವಾಗಿ ಕೀಳರಿಮೆಯಿಂದ ನರಳುತ್ತಾಳೆ. ಪಾವಿತ್ರ್ಯ, ಶೀಲ, ಎಂಬ ಸಿದ್ಧ ಆದರ್ಶಗಳ ಹೊರೆ ಹೊತ್ತು ತನ್ನ ಎದೆಯ ದನಿಯನ್ನೇ ತನ್ನೊಳಗೆ ಬಚ್ಚಿಟ್ಟಿಕೊಂಡು ಮಾನಸಿಕವಾಗಿ, ಕೀಳರಿಮೆಯಿಂದ ನರಳುತ್ತಾಳೆ. ಇಂತಹ ಆದರ್ಶ ಮೌಲ್ಯಗಳ ಭಾರವನ್ನು ಹೊತ್ತು ಸಾಗಿರುವ ಸೀತೆಯು ಇಂದು ಮಾತನಾಡುತ್ತಿದ್ದಾಳೆ ಎಚ್.ವಿ. ಸಾವಿತ್ರಮ್ಮನವರ "ಸೀತೆ ರಾಮ–ರಾವಣ ವಿಮುಕ್ತಿ" ಕಾದಂಬರಿಯ ಸೀತೆ ಮತ್ತೊಮ್ಮೆ ತನ್ನ ಪಾವಿತ್ರವನ್ನು ಈ ಜಗತ್ತಿಗೆ ನಿರೂಪಿಸಲು ನಿರಾಕರಿಸುತ್ತಾಳೆ. ಮರ್ಯಾದ ಪುರುಷೋತ್ತಮ ಮಹಾರಾಜ ರಾಮ ಮತ್ತೊಮ್ಮೆ ತನ್ನ ಪ್ರಜೆಗಳ ಮಾತಿನಂತೆ ತನ್ನ ಹೆಂಡತಿಯ ಶೀಲವನ್ನು ಶಂಕಿಸಿ ಅವಳನ್ನು ಕಾಡಿಗೆ ಅಟ್ಟುತ್ತಾನೆ. ಮುಂದೆ ಸೀತೆ ಲವ–ಕುಶರು ವಾಲ್ಮೀಕಿ ಆಶ್ರಮದಲ್ಲಿರುವ ವಿಚಾರ ತಿಳಿದಾಗ ಸಹ ಆತ ಸೀತೆಯ ಗಂಡನಾಗಲ್ಲದೆ ರಾಜನಾಗಿ ಯೋಚಿಸುತ್ತಾನೆ. ಕಾಡಿಗೆ ಹೋದಾಗ ಆಕೆ ಗರ್ಭಿಣಿಯಾಗಿದ್ದಾಳೆಂದು ಗೊತ್ತಿಲ್ಲದ ಪ್ರಜೆಗಳಿಗೆ ಇವು ತಮ್ಮದೇ ಮಕ್ಕಳೆಂದು ಹೇಗೆ ತಿಳಿಸುವುದು. ಮತ್ತೊಂದು ಬಾರಿ ಸೀತೆಯ ಪಾವಿತ್ರ್ಯದ ಪರೀಕ್ಷೆಗೆ ರಂಗ ಸಿದ್ಧಪಡಿಸುತ್ತಾನೆ. ಸೀತೆ ಸಕಲ ಜನಸಮುದಾಯದೆದುರು ಮತ್ತೊಂದು ಸಲ ಮಕ್ಕಳ ತಲೆಯ ಮೇಲೆ ಕೈಯಿಟ್ಟು ಇವು ರಾಮನ ಮಕ್ಕಳೆ ಎಂದು ಆಣೆ ಮಾಡಿ ತಾನು ಪರಿಶುದ್ಧೆ ಎಂದು ಜಗತ್ತಿಗೆ ಸಾರಬೇಕೆಂದು ಅಪೇಕ್ಷಿಸುತ್ತಾನೆ. ಆದರೆ ಸೀತೆ ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಾಳೆ. ಸೀತೆ ಬಹಳ ಆತ್ಮವಿಶ್ವಾಸದಿಂದ ರಾಮನನ್ನು ಎದುರಿಸುತ್ತಾಳೆ. ಮೊದಲಿನ ಭಯ ದೈರ್ಯ ಇರದೆ ಆತ್ಮವಿಶ್ವಾಸ, ಸ್ಥಿತ ಪ್ರಜ್ಞೆತೆಗಳಿಂದಿರುವ ಅವಳ ಜ್ವಲಿಸುವ ಕಣ್ಣುಗಳ ನೇರದೃಷ್ಟಿಗೆ ರಾಮನೇ ಅಧೀರನಾಗುತ್ತಾನೆ." ನನಗೆ ನಿಮ್ಮಣ್ಣನಿಗೆ ಇದ್ದ ಸಂಬಂಧ ಎಂದೋ ಕಡಿದು ಹೋಯಿತು ಆತನ ಮುಖಾವಲೋಕನ ಮಾಡುವ ಅಭಿಲಾಷೆ ಕೂಡ ನನಗಿಲ್ಲ. ಲಕ್ಷ್ಮಣನಿಗೆ ಮಕ್ಕಳು ತನ್ನವೇ ಎಂದು ಹೇಳುವ ದೈರ್ಯ ನಿಮ್ಮ ಅಣ್ಣನಿಗಿದ್ದರೆ ಕರೆದುಕೊಂಡು ಹೋಗಲಿ, ಇಲ್ಲದಿದ್ದರೆ ಬಿಡಲಿ" ಎಂದು ಹೇಳುವ ಆಕೆಯ ಮಾತಿನಲ್ಲಿ ಪಾರಂಪರಿಕ ಪಾವಿತ್ರ್ಯಕ್ಕೆ ಸೆಡ್ಡು ಹೊಡೆದ ದಿಟ್ಟತನ ಕಾಣುತ್ತದೆ. ಮತ್ತೊಮ್ಮೆ ತನ್ನ ಪಾವಿತ್ರ್ಯ ಪರೀಕ್ಷೆಗೆ ಸಿದ್ಧನಾದ ರಾಮನನ್ನು ತ್ಯಜಿಸಿ, ತಾನು

ಒಂಟಿಯಾಗಿಯೇ ಬದುಕುವ ನಿರ್ಧಾರ ತಳೆಯುವಲ್ಲಿ ಪಾರಂಪರಿಕ ಸಿದ್ಧ ಆದರ್ಶ ಪಾವಿತ್ರ್ಯ ಶೀಲಗಳಾಚೆ ಹೆಣ್ಣಿನ ಅಸ್ತಿತ್ವದ ಅರಿವಿದೆ.

ನೇಮಿಚಂದ್ರ ರವರ 'ನನ್ನದಲ್ಲದ ಬದುಕಿಗಾಗಿ' ಕಥೆಯ ಸರು ಇಂತಹದ್ದೆ ಪಾರಂಪರಿಕ ಮೌಲ್ಯದ ಕನ್ಯತ್ವದ ಮುಖಾಮುಖಿಯಾಗುತ್ತಾಳೆ. ಸರು ವಿವಾಹಿತೆ ಮದುವೆಯಾದ ಅಲ್ಪದಿನದಲ್ಲೆ ಆತ ಮರಣಹೊಂದಿದ್ದ. ವಿದ್ಯೆ, ಉದ್ಯೋಗ ಆರ್ಥಿಕ ಸ್ವಾವಲಂಬನೆಯನ್ನು ಪಡೆದ ಸರುವಿನ ಮುಂದೆ ನಿಲ್ಲುವುದು ಮತ್ತದೆ ಮದುವೆಯ ಪ್ರಶ್ನೆ? ತುಂಬಾ ಹುಡುಗಾಟದ ನಂತರ ಹುಡುಕಿ ಬರುವ ಸಂಬಂಧವನ್ನು ಅವಳಲ್ಲಿಗೆ ಕರೆತಂದದ್ದು ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಅವಳ ಮದುವೆಯ ಕುರಿತಾದ ಜಾಹೀರಾತಿನಲ್ಲಿದ್ದ ಹುಡುಗಿ ಇನ್ನು ಕನ್ಯೆಯಾಗಿದ್ದಾಳೆ ಎನ್ನುವ ಒಕ್ಕಣೆ. ಆಕೆಯ ಮನೆಯವರೆಗೆ ಗೊತ್ತಿಲ್ಲದೆ ತನ್ನ ಮೊದಲ ಗಂಡನ ಸಂಬಂಧದಲ್ಲಿ ಹರಿದಿರುವ ಕನ್ಯತ್ವವನ್ನು ಈಗ ತನ್ನನ್ನು ಮದುವೆಯಾಗಲು ಬಂದಿರುವ ರಮೇಶನಿಗಾಗಿ ಕನ್ಯತ್ವವನ್ನು ಜೋಡಿಸುವ ಹೈಮನೋಪ್ಲಾಸ್ಟಿಯ ಮೊರೆಹೋಗುತ್ತಾಳೆ. ಗೆಳತಿ ಪರಿಚಯಿಸುವ ಆ ಆಪರೇಷನನ್ನು ಮಾಡಿಸಿಕೊಳ್ಳುವ ಮೂಲಕ ತನ್ನ ಹರಿದ ಬದುಕಿಗೆ ತೇಪೆ ಹಾಕಿ ಸರಿಪಡಿಸಲು ನಿರ್ಧರಿಸುತ್ತಾಳೆ. "ಕನ್ಯಾಪೊರೆಯ ಮೇಲೆ ಅವಳ ಇಡೀ ಬದುಕು ಅಸ್ತಿತ್ವಗಳು ನಿರ್ಧರಿತವಾಗುವಂತಹ ಅರ್ಥಹೀನ ಸ್ಥಿತಿಯನ್ನು ನಿರ್ಮಿಸಿದ ಮೌಲ್ಯಗಳನ್ನು ಸ್ವತಃ ವೈದ್ಯರೇ ಪ್ರಶ್ನಿಸುತ್ತಾರೆ." ನನ್ನ ದೃಷ್ಟಿಯಲ್ಲಿ ಈ ಕನ್ಯತ್ವವನ್ನು ಮತ್ತೊಮ್ಮೆ ಹೊಲೆದು ಪ್ರತಿಷ್ಠಾಪಿಸೋ ಈ ಆಪರೇಶನ್ ತೀರಾ ಅಸಾಧ್ಯ ಅಷ್ಟೆ ಅಲ್ಲ. ಅನಾವಶ್ಯಕ ಕೂಡ. ಒಂದು ತೆಳುಪರದೆಯ ಮೇಲೆ ನಮ್ಮ ಇಂದಿನ ವಿವಾದಗಳು ನಿಂತಿವೆಯಲ್ಲ, ನಗುಬರುತ್ತೆ. ಆಟ, ಓಟ, ಅಂತ ಲವಲವಿಕೆಯಿಂದಿರೋ ಇಂದಿನ ಜನಾಂಗದಲ್ಲಿ ಕನ್ಯಾಪೊರೆ ಯಾವುದೇ ಕಾರಣಕ್ಕೂ ಕಳಚಿ ಹೋಗಬಹುದು. ಇದನ್ನೆ ಮುಖ್ಯ ಮಾಡೋ ನಮ್ಮ ಯೋಚನೆಗಳು ಕಳಚಬೇಕು. ಮೌಲ್ಯಗಳು ಬದಲಾಗಬೇಕಿಲ್ಲವೇ? ಗಂಡಿಗಿಲ್ಲದ ಈ ಬಗೆಯ ಶೀಲದ ಹೊರೆ ಹೆಣ್ಣಿಗೇಕೆ ಬೇಕು" ಎಂಬ ವೈದ್ಯರ ಮಾತಿನಲ್ಲಿ ಮನೋ–ಲೈಂಗಿಕತೆಗೆ ಸಂಬಂಧಿಸಿದಂತೆ ಪುರುಷ ಮೌಲ್ಯ ಆರೋಪಿತ ಪಾವಿತ್ರ್ಯ ಕನ್ಯತ್ವ ಶೀಲಗಳ ಹೊರೆ ಕಳಚುತ್ತದೆ. ಅರ್ಥಹೀನ ಮೌಲ್ಯಗಳಿಗಾಗಿ ತನ್ನನ್ನು ತಾನೆ ಮೋಸಗೊಳಿಸಿಕೊಳ್ಳಲು ನಿರ್ಧರಿಸುವ ಸರು ಆಪರೇಶನ್ ಮಾಡಿಸಿಕೊಳ್ಳ'ದೆಯೆ ಬದುಕು ಎದುರಿಸುವ ನಿರ್ಧಾರ ತಳೆಯುತ್ತಾಳೆ.

ಪಾವಿತ್ರ್ಯ, ಶೀಲ, ಕನ್ಯತ್ವಗಳು ಸಹಜ ಆಲೋಚನೆಗಳಿಂದಲೇ ಆಕೆಯನ್ನು ದೂರವಿಟ್ಟು ಆಕೆಯ ಎದೆಯ ದನಿಗಳನ್ನೇ ಹೊಸಕಿ ಹಾಕುವಂತವು. ಗಂಡಿಗಿಲ್ಲದ ಹೆಣ್ಣಿನಿಂದ ಮಾತ್ರ ನಿರೀಕ್ಷಿಸಲಾಗುತ್ತಿರುವ ಕನ್ಯತ್ವ, ಪಾವಿತ್ರ್ಯ ಕಲ್ಪನೆಗಳೇ ಅರ್ಥಹೀನ. ಇವು ಹೆಣ್ಣನ್ನು ಗಂಡಿಗೆ ಅಧೀನವಾಗಿಸುವ ಕುತಂತ್ರದ ಹೊರತು ಬೇರಲ್ಲ.

ತಾಯ್ತನ ಹೆಣ್ಣಿನ ವಿಶಿಷ್ಟ ಜೈವಿಕ ಫಲ. ಅದು ಆಕೆಯ ವಿಶಿಷ್ಟ ಶಕ್ತಿ. ಆದರೆ ಪುರುಷ ಪ್ರಾಧಾನ್ಯತೆ ಪುರುಷ ಮೌಲ್ಯಗಳು ಹೆಣ್ಣಿನ ಸಂತಾನೋತ್ಪತ್ತಿಯ ಶಕ್ತಿಯನ್ನು ದೌರ್ಬಲ್ಯದ ಸಂಕೇತವಾಗಿ ನೋಡುತ್ತಾ ಅದಕ್ಕೆ ತಾಯ್ತನದ ಮೌಲ್ಯಗಳನ್ನು ಅಂಟಿಸಿ ಹೆಣ್ಣಿನ ಬದುಕಿನ ಗುರಿಗಳನ್ನೇ ಮೊಟಕುಗೊಳಿಸುತ್ತದೆ. "ಜೈವಿಕ ತಾಯಿಯ ಸಂಪರ್ಕದಲ್ಲಿ ಬೆಳೆಯುವಂಥ ಮಕ್ಕಳು ಮಾತ್ರ ಸರಿಯಾದ ರೀತಿಯಲ್ಲಿ ಬೆಳೆಯುತ್ತಾರೆ. ಜೈವಿಕ ತಾಯಿಯಿಂದ ದೂರವಾದ ಮಕ್ಕಳು ಸಮಾಜ ವಿರೋಧಿ ಪ್ರವೃತ್ತಿಗಳನ್ನು ಬೆಳೆಸಿಕೊಳ್ಳುತ್ತಾರೆ. ಓರ್ವ ಸ್ತ್ರೀಯ ಮೇಲೆ ತಾಯ್ತನದ ಸದ್ಗುಣಗಳನ್ನು ಬಲತ್ಕಾರವಾಗಿ ಹೇರಿ ತಾಯ್ತನವನ್ನು ತಿರಸ್ಕರಿಸುವ ಸ್ತ್ರೀಯರನ್ನು ಕಡೆಗಣ್ಣಿನಿಂದ ನೋಡುವ ಪ್ರವೃತ್ತಿ ಆಕೆಯ ಇಚ್ಛೆಗೆ ವಿರುದ್ಧವಾಗಿ ಆಕೆಯನ್ನು ಮಕ್ಕಳನ್ನು ಹೆತ್ತು ಹೊತ್ತು ಪೋಷಿಸಲು ಬಲತ್ಕರಿಸುವುದು" ಅದೇ ರೀತಿ ಮಕ್ಕಳನ್ನು ಪೋಷಣೆ ಮಾಡುವಾಗಲು ತಾಯಿಗೆ ಸಂಪೂರ್ಣ ಸ್ವಾತಂತ್ರವಿರದೆ ಇರುವುದು; ಸ್ತ್ರೀಯರ ಬದುಕಿನ ಗುರಿಗಳನ್ನು ಪುರುಷನ ಹೊಣೆಗಾರಿಕೆ ಇಲ್ಲದ ಹೆಣ್ಣಿನ ತಾಯ್ತನ ಮೊಟಕುಗೊಳಿಸುತ್ತದೆ. ಹೀಗಾಗಿ ಪುರುಷ ಪ್ರಧಾನ ವ್ಯವಸ್ಥೆ ಸ್ತ್ರೀ–ಪುರುಷರ ನಡುವಿನ ಜೈವಿಕ ತಾಯ್ತನವನ್ನು ಅತಿಯಾಗಿ ದೊಡ್ಡದು ಮಾಡಿ, ಈ ಭಿನ್ನ ಜೈವಿಕತೆಯ ಕಾರಣದಿಂದಾಗಿಯೇ ಸ್ತ್ರೀ–ಪುರುಷರು ಸಮಾಜದಲ್ಲಿ ಸಮಾನ ಪಾತ್ರಗಳನ್ನು ನಿರ್ವಹಿಸಲು ಸಾಧ್ಯವಿಲ್ಲ ಎಂಬ ಮಿಥ್ಯೆ ಸೃಷ್ಟಿಸಿದೆ.

ಶಿಶುವಿಗೆ ಜನನ ನೀಡುವುದರಲ್ಲಿಯೇ ಹೆಣ್ಣು ಜೀವನದ ಸಾರ್ಥಕತೆ ಅಡಗಿದೆ ಎಂಬ ಮಿಥ್ಯೆಯ ಜಾಲದಲ್ಲಿ ಸ್ತ್ರೀಯನ್ನು ಬಂಧಿಸಿಡುವ ಪುರುಷ ಪ್ರಧಾನತೆಯ ಈ ಮಿಥ್ಯೆಗಳಿಂದ ಅವಳ ಹಿಡಿಯಾದ ವ್ಯಕ್ತಿತ್ವವನ್ನು ದಮನ ಮಾಡಿದಂತ ಪುರುಷ ಹುನ್ನಾರವನ್ನು ಅರಿತ ಆಕೆ ತಾಯ್ತನದ ಆಚೆ ಸಾಧನೆ ಸಾಧ್ಯತೆಗಳನ್ನು ಗೌಣವಾಗಿಸಿದ ವ್ಯವಸ್ಥೆಯ ಕರಾಳತೆಯನ್ನು ಅರಿತ ಸ್ತ್ರೀ ಹೊಸ ಅರಿವಿನ ಬೆಳಗಿನಲ್ಲಿ ಹೊಸ ಸಾಧ್ಯತೆಗಳತ್ತ ಮುಖ ಮಾಡಿದ್ದಾಳೆ.

ನೇಮಿಚಂದ್ರರ 'ಹೊಸಹುಟ್ಟು' ಕಥೆಯಲ್ಲಿ ಇಂತಹ ಮಿಥ್ಯೆಗಳ ಆಚೆ ತಾಯ್ತನವನ್ನು ಕಾಣುವ ಹೊಸ ನೋಟ ಕ್ರಮವಿದೆ. ಈ ಕಥೆಯ ಹೆಣ್ಣಿಗೆ ಎಂದೂ ತಾನು ತಾಯಿಯಾಗಬೇಕೆಂಬ ಅದಮ್ಯ ಬಯಕೆ ಕಾಡಿದ್ದಲ್ಲ. ಬಿಡುವಿಲ್ಲದ ಬದುಕಿನಲ್ಲಿ ಕಲಾವಿದೆಯಾದ ಈಕೆಗೆ ಒಂದರ ನಂತರ ಒಂದು ಕಲಾಪ್ರದರ್ಶನಗಳು ಹಗಲಿರುಳು ಬಣ್ಣಗಳ ಒಡನಾಟ, ಪತ್ರಿಕೆಗಳ ಪ್ರಶಂಸೆಗಳ, ನಡುವೆ ಮಗುವಿನ ಕೊರತೆ ಕಾಣಲೇ ಇಲ್ಲ. ಸಾಧನೆಯ ಬದುಕಿನಲ್ಲಿ ತಮ್ಮನ್ನು ಸದಾ ಕಾಲ ತೊಡಗಿಸಿಕೊಂಡಿರುವ ಕೆಲವು ಹೆಣ್ಣುಗಳಿಗೆ ತಾಯ್ತನ ಅನಿವಾರ್ಯವೆನಿಸುವುದಿಲ್ಲ. ಆದರೆ ಪುರುಷ ಮೌಲ್ಯಯುತ ಸಮಾಜ ಅಂತಹ ಹೆಣ್ಣುಗಳನ್ನು ಸಹಜವಾಗಿ ಕಾಣುವುದಿಲ್ಲ. ಶಶಿಯಂತೆ ಪ್ರತಿಭೆ ಇರುವ ಉಳಿದ ಆಕೆಯ ಗೆಳತಿಯರು, ಆಕೆಯ ಸಹೋದರಿಯರು ತಾಯ್ತನವನ್ನು ಪೂರ್ಣ ಸಂತೋಷದಿಂದ ಅನುಭವಿಸದೆ ಹೋದರೂ, ಪುರುಷ ಮೌಲ್ಯಗಳಿಗೆ ಕಟ್ಟುಬಿದ್ದು ತಾಯ್ತನದ ಆದರ್ಶದ ಪಾಠವನ್ನು ಶಶಿಗೆ ಮಾಡುವಲ್ಲಿ ಪುರುಷ ಮೌಲ್ಯಗಳು ಹೆಣ್ಣನ್ನು ಹೇಗೆ ಆವರಿಸಿವೆ ಎಂಬ ಸತ್ಯ ಗುರುತಿಸುತ್ತದೆ. ಶಶಿಗೆ ಮಕ್ಕಳಾಗುವ ಸಾಧ್ಯತೆಗಳೇ ಕಡಿಮೆ ಎಂದು ವೈದ್ಯರು ಹೇಳಿದಾಗ ಕುಗ್ಗುವ ಆಕೆಗೆ ಧೈರ್ಯ ಹೇಳುವ ಆಕೆಯ ಗಂಡ ರಮೇಶ, ಗೆಳತಿಯ ಮಾತಿನಲ್ಲಿ ತಾಯ್ತನದ ಹೊಸನೋಟಕ್ರಮವಿದೆ. "ಶೇಕಡಾ 90 ಮಂದಿ ಹೆಂಗಸರು ಹೆರಬಲ್ಲರು, ಹೆರುತ್ತಾರೆ. ನಿನ್ನಂತೆ ಕುಂಚದ ಕೂಸುಗಳನ್ನು ಹೆರಬಲ್ಲವರು ಎಷ್ಟು ಜನ ಹೇಳು? ಹೆಣ್ಣಿಗೆ ತಾಯ್ತನವೇ ಬಹುದೊಡ್ಡ ಸಾಧನೆ, ಆ ಸಾಧನೆಯ ಆಚೆ ಆಕೆಯ ಬದುಕೇ ವ್ಯರ್ಥ ಎಂಬ ಮೌಲ್ಯಗಳಿರುವಲ್ಲಿ ಹೆಣ್ಣಿನ ಸೃಜನಶಕ್ತಿ. ಆಕೆಯಿಂದಾದ ವ್ಯಕ್ತಿತ್ವ ಮತ್ತು ಸಾಧನೆಗೆ ಬೆಲೆ ಕೊಡುವ ರಮೇಶ ಪುರುಷ ಪಾರಂಪರಿಕ ಗಂಡಸರಿಗಿಂತ ಭಿನ್ನವಾಗಿ ಆಲೋಚಿಸುವವ, "ನಮ್ಮದಾನ ಸೂರ್ಯವಂಶ, ಚಂದ್ರವಂಶ ರತ್ನಖಚಿತವಾದ ಸಿಂಹಾಸನ ಕಾದುಕುಳಿತಿದಿಯೆ ಉತ್ತರಾಧಿಕಾರಿ ಬೇಕು ಎಂದು? ಹೆಣ್ಣಿನ ತಾಯ್ತನದಿಂದ ನಿರ್ಧರಿತವಾಗುವ ಗಂಡಿನ ವಂಶ ಪಾವಿತ್ರ್ಯವನ್ನು ಭಂಜಿಸುವ ಬದಲಾದ ಸಾಮಾಜಿಕ ಪರಿಸ್ಥಿತಿಯಲ್ಲಿಯೂ ಬದಲಾಗದ ಕುರುಡು ಮೌಲ್ಯಗಳನ್ನು ವಿಡಂಬಿಸುವ ರಮೇಶನಂಥಹ ಪುರುಷ

ಪಾತ್ರವನ್ನು ಸೃಷ್ಟಿಸಿರುವ ನೇಮಿಚಂದ್ರ ಪುರುಷ ಮತ್ತು ಪುರುಷಪರ ಆಲೋಚನೆಗಳು ಬದಲಾದರೆ, ಹೆಣ್ಣಿನ ಪಾರಂಪರಿಕ ಮೌಲ್ಯಗಳಾಚೆಯ ಹೊಸ ಸಾಧ್ಯತೆಗಳು ಹೆಚ್ಚು ಸುಲಭ. ಹಾಗಾಗಿ ಈ ಕಥೆಯ ರಮೇಶನ ಪಾತ್ರವನ್ನು ಪಾರಂಪರಿಕ ಪುರುಷ ಪಾತ್ರಕ್ಕಿಂತ ಭಿನ್ನವಾಗಿರುವುದನ್ನು ಗುರುತಿಸಬಹುದು. ಶಶಿಯ ಗೆಳತಿ ಅದಿತಿಗುಪ್ತಳ ಪ್ರಕಾರ ಚಿತ್ರ ಬಿಡಿಸೋದು, "ಕತೆ ಬರೆಯೋದು, ಯಾವುದೇ ಸೃಜನಶೀಲ ಕಾರ್ಯ ಹೆರುವ ಹೊರುವ ಕ್ರಿಯೆಯಂತೆಯೇ ಹಾಗೆ ನೋಡಿದರೆ ನನ್ನ ಪ್ರೆಜ್ನೆಂಸಿಯಲ್ಲೆ ಸೃಜನಾತ್ಮ ಅದ್ಭುತವೇನೂ ಆಗಲಿಲ್ಲ. ಹೆಣ್ಣಿನ ಸೃಜನ ಶಕ್ತಿಯೆಲ್ಲವೂ ತಾಯ್ತನದ ಮರೆಯಲ್ಲಿ ಗೌಣವಾಗಿ ತಾಯ್ತನವೇ ಹೆಣ್ಣಿನ ಬಹುದೊಡ್ಡ ಸೃಜನಶಕ್ತಿ ಸಾಧನೆಯಾಗಿ ಕುಳಿತಿರುವ ಪುರುಷ ಮೌಲ್ಯದ ಒಂದು ಮಿಥ್ನ ಮುಖಾಮುಖಿಯನ್ನು ಕಾಣಬಹುದು. ಅದಿತಿ ಮತ್ತು ರಮೇಶ ತೋರುವ ತಾಯ್ತನದ ಹೊಸ ನೋಟಕ್ರಮದಲ್ಲಿ ಆಲೋಚಿಸುವ ಶಶಿ "ಅದಿತಿ ಹೇಳುವಂತೆ ತಾಯ್ತನದ ತೀವ್ರತೆ ನನಗೆ ಅನುಭವವಾಗಿಲ್ಲ. ಅರ್ಧ ಹೆಣ್ಣುಗಳಿಗೆ ಆಗುವುದೋ ಇಲ್ಲವೋ ಗೊತ್ತಿಲ್ಲ. ಸಮಾಜ ಸಂಪ್ರದಾಯಗಳ ಒತ್ತಡಗಳಲ್ಲಿ, ಹೆಣ್ತನದ ಪರಿಪೂರ್ಣತೆ ತಾಯ್ತನದಲ್ಲೆಂಬ ಹುಚ್ಚುವಾದಗಳಲ್ಲಿ ತಾಯಿಯಾಗುತ್ತಾರೆ. ಸಮಾಜದ ತಮ್ಮ ಪರಿಸರದ ಒತ್ತುಗಳಿಗೆ, ಅನಿಸಿಕೆಗಳಿಗೆ, ನಮ್ಮನ್ನು ಮಾರಿಕೊಳ್ಳುವುದು. ಅವರೆಲ್ಲರ ನಿರೀಕ್ಷೆಗೆ ತಕ್ಕಂತೆ ನಮ್ಮ ಬದುಕು ರೂಪಿಸಿಡುವುದು ಸುಲಭ. ಹಾಗೆ ನೋಡಿದರೆ ತಾಯ್ತನವೆನ್ನುವುದು ಅವಳ ಸಾಧನೆ, ಸಾಧ್ಯತೆ, ಅವಳ ವ್ಯಕ್ತಿತ್ವ-ಅಸ್ತಿತ್ವದಾಚೆ ಅದಮ್ಯವಾಗಿ ಕಾಡುವ ಬಯಕೆಯೆ? ಅಥವಾ ಪರಂಪರೆಯಿಂದ ಹರಿದು ಅವಳನ್ನು ಆವರಿಸಿರುವ ಮಾಯೆಯ 'ಬಿಟ್ಟನೆಂದರೂ ಬಿಡದಿ ಮಾಯೆ' ಎಂಬಂತೆ ಅವಳ ಅಸ್ತಿತ್ವ, ವ್ಯಕ್ತಿತ್ವವನ್ನು ಕಳೆದುಕೊಂಡು ತಾಯ್ತನವನ್ನು ಪೂರ್ಣ ಅಪ್ಪುವುದು ಅದನ್ನು ದೊಡ್ಡ ಸಾಧನೆಯೆಂಬ ಭ್ರಮೆಯಲ್ಲಿ ಮುಳುಗುವುದು, ಸಮಾಜ ಒಪ್ಪುವಂತೆ ಬದುಕುವುದು ಸುಲಭ. ಆದರೆ ಹೆಣ್ಣಿಗೆ ಅನಿವಾರ್ಯವೇ ಅನಂತ ಅವಕಾಶಗಳ ಮಧ್ಯೆ ಇಂದು ಬದುಕುತ್ತಿರುವ ಆಕೆಗೆ ಇದು ಅನಿವಾರ್ಯವೇ? ಯುಕ್ತಿ-ಶಕ್ತಿಯಲ್ಲಿ ವ್ಯಕ್ತಿಗಿಂತ ವ್ಯಕ್ತಿ ವ್ಯತ್ಯಾಸವಿರಬಹುದೇ ವಿನ: ಭಿನ್ನ ಲಿಂಗಗಳ ನಡುವೆ ವ್ಯತ್ಯಾಸವಿರಲು ಸಾಧ್ಯವಿಲ್ಲ. ಹಾಗಾಗಿ ಹೆಣ್ಣು ತಾಯಿಯಾಗುವ ಕಾರಣ ಅವಳ ಜೈವಿಕತೆಯ ಕಾರಣ ಆಕೆ ದುರ್ಬಲಳಲ್ಲ. ತಾಯ್ತನವೆನ್ನುವುದು ಜೀವಂತಿಕೆಯ ಸಂಕೇತ. ಸೃಷ್ಟಿಯ ರಹಸ್ಯ, ಗಂಡಿನಲ್ಲಿ ಇಲ್ಲದ ಹೆಣ್ಣಿಗೆ ಮಾತ್ರ ಇರಬಹುದಾದ ಸೃಷ್ಟಿಯ ಶಕ್ತಿ ಅಂತಹದೊಂದು ಶಕ್ತಿಯ ಬಗೆಗೆ ನಮ್ಮ ಪರಂಪರೆಯಲ್ಲಿ ಆಕೆಗೆ ಪೂಜ್ಯನೀಯ ಸ್ಥಾನವಿತ್ತು, ಮಾತೃ ಮೂಲವಿತ್ತು. ಸೃಷ್ಟಿಕ್ರಿಯೆಯಾಗಿ ಅಲೆಮಾರಿ ಕಾಲದಿಂದಲೂ ಹೆಣ್ಣು ಪೂಜೆಗೆ, ಗೌರವಕ್ಕೆ ಪಾತ್ರಳಾಗಿದ್ದಳು. ಆಸ್ತಿಯ ಹಕ್ಕು ಮತ್ತು ಆಕೆಯ ತಾಯ್ತನದಿಂದಿನ ತನ್ನ ಪಾತ್ರದ ಅರಿವು ಗಂಡಿಗೆ ಬಂದ ನಂತರದಲ್ಲಿ ಹೆಣ್ಣಿಗೆ ಇರುವ ಆ ಸ್ಥಾನದ ಮೇಲಿರುವ ಅಧಿಕಾರವನ್ನು ಕಸಿದುಕೊಂಡು ಆಕೆಯನ್ನು ಗರ್ಭಗುಡಿಯ ದೇವಿಯಾಗಿ ಪ್ರತಿಷ್ಠಾಪಿಸಿದ. ಹೀಗೆ ಹೆಣ್ಣನ್ನು ಆರತಿ ಹಚ್ಚಿ ಒಂದು ಕಡೆ ಸುಟ್ಟ, ಬೆಂಕಿ ಹಂಚಿ ಇನ್ನೊಂದೆಡೆ ಸುಟ್ಟ, ಹೀಗೆ ಸುಟ್ಟು ಬೂದಿಯಾಗಿರುವ ಹೆಣ್ಣು ಆ ಬೂದಿಯಿಂದ ಪುರುಷ ಮೌಲ್ಯ ಆರೋಪಿತ ಮೌಲ್ಯಗಳನ್ನು ಕೊಡವಿ ಮೇಲೆದ್ದು ಒಂದು ಸಶಕ್ತ ಸೂಕ್ತ ವ್ಯಕ್ತಿತ್ವವನ್ನು, ಅಸ್ತಿತ್ವವನ್ನು, ಕಾಣುವ ನಿಟ್ಟಿನಲ್ಲಿ, ಪುರುಷ ಮೌಲ್ಯಗಳು ಸಂಸ್ಕೃತಿ ಮತ್ತು ಪುರುಷ ಬದಲಾಗಬೇಕಾಗಿರುವ ಅನಿವಾರ್ಯತೆಯನ್ನು ಹೆಣ್ಣಿನ ಜೈವಿಕತೆಯ ಮೇಲೆ ಪುರುಷ ಹಿಡಿತದ ಸಾದಿಸಿರುವ ಇತಿಹಾಸದ ಬಹುದೊಡ್ಡ ದುರಂತವನ್ನು ಸರಿಪಡಿಸಿರುವ ನಿಟ್ಟಿನಲ್ಲಿ ಕನ್ನಡದ ಮೂರು ಪ್ರಸಿದ್ಧ ಲೇಖಕಿಯರ ಕಥೆಗಳು ಮತ್ತು ಕಾದಂಬರಿಯನ್ನು ಗಮನಿಸಬಹುದಾಗಿದೆ.

**ಪರಾಮರ್ಶನ ಕೃತಿಗಳು**


1. ಹೆಚ್.ಎಸ್.ಶ್ರೀಮತಿ –
2. ನೇಮಿಚಂದ್ರ – ಇಲ್ಲಿಯವರೆಗಿನ ನೇಮಿಚಂದ್ರರ ಕತೆಗಳು.
3. ವೀಣಾಶಾಂತೇಶ್ವರ – ನಡೆದದ್ದೆ ದಾರಿ. (ಸಮಗ್ರ ಕಥನ ಸಾಹಿತ್ಯ)
4. ಎಚ್.ವಿ. ಸಾವಿತ್ರಮ್ಮ – ಸೀತೆ, ರಾಮ, ರಾವಣ ಮತ್ತು ವಿಮುಕ್ತಿ.
5. ಗೀತಾವಸಂತ – ಹೊಸದಿಗಂತ ಹೊಸದಾರಿ.
6. ಸಿಮೋನದ ಬೋವಾ – ದ ಸೆಕೆಂಡ್ ಸೆಕ್ಸ್.